ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 25–02–2019

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:

ಜಗದೀಶ ಹಿರೇಮನಿ,
ಸದಸ್ಯರು, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ

ದಿನಾಂಕ: 26–02–2019 ಮಂಗಳವಾರ ಮಧ್ಯಾಹ್ನ 2–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 334, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು

2. 2018 ನೇ ಸಾಲಿನ ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ:
ಸಮಾರೋಪ ಸಮಾರಂಭ:

ಮುಖ್ಯ ಅತಿಥಿ:
ಎಂ.ಬಿ. ಪಾಟೀಲ್
ಗೃಹ ಸಚಿವರು, ಕರ್ನಾಟಕ ರಾಜ್ಯ ಬೆಂಗಳೂರು

ಮುಖ್ಯ ಅತಿಥಿ
ಶ್ರೀಮತಿ ಆಶಾ ಪಾಟೀಲ್

ಸಮಯ: 26–2–2019 ಮಂಗಳವಾರ ಸಂಜೆ 4–00 ಗಂಟೆಗೆ
ಸ್ಥಳ: ಕೆ.ಎಸ್.ಆರ್.ಪಿ. ಕ್ರೀಡಾಂಗಣ, ಕೋರಮಂಗಲ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## Clarification

It has come to the notice of BESCOM that a Seven year old Boy by name Uday while playing at Rajkumar park, Kammanahalli limits Bengaluru, has come in contact with Live portion of skinned out LT Street Light wire and has been electrocuted and died on 24.02.2019.

As first information received it is learnt that renovation work taken up by BBMP is going on in the said park. The agency who has taken the renovation work has taken un-authorised power supply for welding purpose by skinning out the insulated wire at various points of the LT Street Light. The skinned out wire has not been covered with insulation after the work is completed. The said boy came in contact with live portion of the said LT wire while playing in the park and got electrocuted. Detailed report is awaited.

Since it is purely the negligence of the implementing agency, it is informed to BBMPto take action against the said agency. Local BESCOM Executive Engineer is also informed to take legal action against the said agency for having taken un-authorised power supply for welding purpose.

## ಸ್ಪಷ್ಟೀಕರಣ

**ಬೆಂಗಳೂರು, ಫೆ 25 (ಕರ್ನಾಟಕ ವಾರ್ತೆ):**

ದಿನಾಂಕ 24.02.2019 ರಂದು ಉದಯ್ ಎಂಬ 7 ವರ್ಷದ ಬಾಲಕ, ಬೆಂಗಳೂರಿನ ಕಮ್ಮನಹಳ್ಳಿ ವ್ಯಾಪ್ತಿಗೆ ಒಳಪಡುವ ರಾಜ್‌ಕುಮಾರ್ ಪಾರ್ಕ್‌ನಲ್ಲಿ ಆಟವಾಡುತ್ತಿದ್ದಾಗ ಇನ್ಸುಲೇಷನ್ ಇಲ್ಲದ ಬೀದಿದೀಪದ LT ವೈರನ್ನು ಆಕಸ್ಮಿಕವಾಗಿ ತಗುಲಿದ ಕಾರಣ ವಿದ್ಯುತ್ ಪ್ರವಹಿಸಿ, ಮೃತಪಟ್ಟಿರುವುದು ಬೆವಿಕಂನ ಗಮನಕ್ಕೆ ಬಂದಿರುತ್ತದೆ.

ಬೆವಿಕಂಗೆ ಲಭಿಸಿರುವ ಪ್ರಥಮ ವರದಿಯ ಪ್ರಕಾರ, ಸದರಿ ಪಾರ್ಕ್‌ನಲ್ಲಿ BBMP ವತಿಯಿಂದ ಪಾರ್ಕ್‌ನ ನವೀಕರಣದ ಕಾರ್ಯವನ್ನು ಕೈಗೊಂಡಿರುವುದು ತಿಳಿದು ಬಂದಿರುತ್ತದೆ. ಈ ಕಾರ್ಯವನ್ನು ಗುತ್ತಿಗೆ ಪಡೆದಿರುವ ಏಜೆನ್ಸಿರವರು, ನವೀಕರಣ ಕಾರ್ಯಕ್ಕಾಗಿ ವೆಲ್ಡಿಂಗ್ ಮಾಡಲು ಬೀದಿ ದೀಪದ ವೈರ್‌ನಿಂದ ಇನ್ಸುಲೇಷನ್ ತೆಗೆದು ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಹಲವು ಪಾಯಿಂಟ್‌ಗಳಲ್ಲಿ ತೆಗೆದುಕೊಂಡಿರುತ್ತಾರೆ. ವೆಲ್ಡಿಂಗ್ ಕೆಲಸ ಮುಗಿದ ನಂತರ ಇನ್ಸುಲೇಷನ್ ತೆಗೆದ ವೈರನ್ನು ಸರಿಯಾಗಿ ಅಥವಾ ಸುರಕ್ಷಿತವಾಗಿ ಇನ್ಸುಲೇಷನ್ ಟೇಪ್‌ನಿಂದ ಭದ್ರಪಡಿಸಿದೇ ಹಾಗೆಯೇ ಬಿಟ್ಟಿರುತ್ತಾರೆ. ಬಾಲಕನು ಪಾರ್ಕ್‌ನಲ್ಲಿ ಆಟವಾಡುತ್ತಾ, ಆಕಸ್ಮಿಕವಾಗಿ ತೆರೆದ ವೈರಿನ ಸಂಪರ್ಕಕ್ಕೆ ಬಂದು, ವಿದ್ಯುತ್ ಪ್ರವಹಿಸಿ ಮೃತಪಟ್ಟಿರುತ್ತಾನೆ. ವಿವಿರವಾದ ವರದಿ ನಿರೀಕ್ಷಣೆಯಲ್ಲಿದೆ.

ಈ ದುರ್ಘಟನೆಗೆ, ನವೀಕರಣ ಕಾರ್ಯ ಕೈಗೊಂಡ ಏಜೆನ್ಸಿರವರ ನಿರ್ಲಕ್ಷತೆಯೇ ಪ್ರಮುಖ ಕಾರಣವಾಗಿರುವುದರಿಂದ, ಅವರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ BBMP ಅಧಿಕಾರಿಗಳಿಗೆ ತಿಳಿಸಲಾಗಿದೆ. ಅಲ್ಲದೆ ವೆಲ್ಡಿಂಗ್‌ಗಾಗಿ ಅನಧಿಕೃತ ವಿದ್ಯುತ್ ಸಂಪರ್ಕವನ್ನು ಪಡೆದ ಕಾರಣ ಏಜೆನ್ಸಿರವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ, ಬೆವಿಕಂನ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೂ ಸೂಚಿಸಲಾಗಿದೆ.

# ಅರ್ಜಿ ಆಹ್ವಾನ

**ಬೆಂಗಳೂರು, ಫೆ 25 (ಕರ್ನಾಟಕ ವಾರ್ತೆ):**

**ಪದವಿ ಪೂರ್ವ ಶಿಕ್ಷಣ ಇಲಾಖೆಯು 2019-20 ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳು/ಟ್ರಸ್ಟ್‌ಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆನ್‌ಲೈನ್ ಮೂಲಕ ಅರ್ಜಿ ನಮೂನೆ (ಫಾರಂ –I) ರಲ್ಲಿ ದಿನಾಂಕ 11-03-2019 ರೊಳಗೆ ಅರ್ಜಿ ಸಲ್ಲಿಸಿ ಹೆಸರನ್ನು ನೋಂದಾಯಿಸಿಕೊಳ್ಳಲು ಜಂಟಿ ನಿರ್ದೇಶಕರು(ಮಾ &ಅ) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಇಲಾಖೆಯ ವೆಬ್‌ಸೈಟ್www.pue.kar.nic.in** ನಲ್ಲಿ ಪಡೆಯಬಹುದು.

**ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿ 2017-18 ಮತ್ತು 2018-19 ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಕಾಲೇಜು ಮಂಜೂರಾತಿ ಆದೇಶವನ್ನು ಪಡೆಯದೇ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳು/ಟ್ರಸ್ಟ್‌ಗಳು ಪ್ರಸ್ತುತ ಪರಿಷ್ಕೃತ ದರದ ವ್ಯತ್ಯಾಸದ ಮೊತ್ತವನ್ನು ಪಾವತಿಸಿದ ಚಲನ್‌ನೊಂದಿಗೆ 2019-20 ನೇ ಶೈಕ್ಷಣಿಕ ಸಾಲಿನಲ್ಲಿ ಮತ್ತೊಮ್ಮೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಮಾರ್ಚ್ 3 ರಂದು ಆರೋಗ್ಯ ಮೇಳಕ್ಕೆ ಚಾಲನೆ

ಬೆಂಗಳೂರು: ಮಾರ್ಚ್ 3, 5 ಹಾಗೂ 7 ರಂದು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಬೃಹತ್ ಆರೋಗ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಲ್ಲೇಶ್ವರಂ ಶಾಸಕ ಡಾ: ಅಶ್ವಥ್‌ನಾರಾಯಣ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಈ ಕುರಿತು ಹಮ್ಮಿಕೊಳ್ಳಲಾದ ಸಭೆಯಲ್ಲಿ ಈ ವಿಷಯ ತಿಳಿಸಿದರು.

ಮಾರ್ಚ್ 3 ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ (ದಕ್ಷಿಣ ಜಿಲ್ಲೆ ವ್ಯಾಪ್ತಿ) ಈ ಅಭಿಯಾನ ಉದ್ಘಾಟನೆ ನಡೆಯಲಿದೆ. ಮಾರ್ಚ್ 5 ರಂದು ಸರ್ ಸಿವಿ ರಾಮನ್

ಆಸ್ಪತ್ರೆ (ಕೇಂದ್ರ ವಲಯ) ಹಾಗೂ ಮಾರ್ಚ್ 7 ರಂದು ದಾಸರಹಳ್ಳಿ ಮೈದಾನ (ಉತ್ತರ ವಲಯ) ದ ಆರೋಗ್ಯ ಮೇಳ ನಡೆಯಲಿದೆ ಎಂದರು.

ಎಲ್ಲಾ ಇಲಾಖೆಗಳು ಈ ಆರೋಗ್ಯ ಮೇಳದಲ್ಲಿ ಸಮನ್ವಯ ವಹಿಸಿ ಯಶಸ್ವಿಗೊಳಿಸಬೇಕೆಂದರು. ಈ ಮೇಳಕ್ಕೆ 12 ಲಕ್ಷ ಅನುದಾನ ಬಿಡುಗಡೆಯಾಗಿದೆ. ಇಲ್ಲಿ ಆರೋಗ್ಯ ಯೋಜನೆ ಸೌಲಭ್ಯಗಳು, ಜನೌಷಧಿ ಬಗ್ಗೆ ಜನರಿಗೆ ಮಾಹಿತಿ ನೀಡಲು ಮಳಿಗೆಗಳನ್ನು ತೆರೆಯಲು ಸೂಚಿಸಿದರು. ಅಲ್ಲದೆ ಜನರಿಗೆ ಚಿಕಿತ್ಸೆಗಳ ಬಗ್ಗೆ ಮಾಹಿತಿ ನೀಡಲಾಗುವುದು. ಶಾಲಾ ಮಕ್ಕಳು, ಅಂಗನವಾಡಿ ಹಾಗೂ ಸಾರ್ವಜನಿಕರಿಗೆ ಈ ಮೇಳದ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಿಸಿ, ಭಾಗವಹಿಸುವಂತೆ ಮಾಡಬೇಕಿದೆ ಎಂದರು.

ಮೇಳದಲ್ಲಿ ಸ್ವಚ್ಚತೆ, ಉಪಾಹಾರ, ವೈದ್ಯರ ನಿಯೋಜನೆ ಇತ್ಯಾದಿಗಳನ್ನು ಸಂಬಂಧಪಟ್ಟ ಇಲಾಖೆ ಮಾಡಬೇಕು. ಬಿಬಿಎಂಪಿ ಸಹ ಇದಕ್ಕೆ ಸಹಕಾರ ನೀಡಬೇಕೆಂದು ಶಾಸಕರು ತಿಳಿಸಿದರು.

ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರ್ಚನ, ನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪ್ರಕಾಶ್ ಉಪಸ್ಥಿತರಿದ್ದರು.